ಮೊದಲು ಹೆಣ್ಣು ಗಂಡುಗಳೆರಡರ ದೇಹ ಸಂವೇದನೆಗೂ ಜಾತಿ, ಗೀತಿ ಇರುತ್ತದಲ್ಲವಾ...' ಎಂದು ಪ್ರತಿಯಾಗಿ ಹೇಳಿದ್ದ ಮಾತು ಆಗ ವಾರಿಜಾಳ ಬಗ್ಗೆ ಪಾಸಿಟೀವ್ ಆಗಿತ್ತು. ಒಂದು ದಿನ ಅವಳು, 'ನೋಡು ವಿವೇಕ, ನೀನು ಅವಿವೇಕಿ ತರಾ ನನ್ನ ಜೊತೆ ಜಗಳ ಆಡಬೇಡ. ನನ್ನ ದೇಹ ಮತ್ತು ನಿನ್ನ ದೇಹದ ನಡುವೆ ಏಕಸಾಮ್ಯತೆ ತರೋದು ಇಲ್ಲವೇ ಅದಕ್ಕಾಗಿ ನೀನು ನಿರಂತರ ಪ್ರಯತ್ನಿಸಿ ನನ್ನ ನಡವಳಿಕೆಯ ಮೇಲೆ ಪ್ರಭಾವ ಮಾಡುವುದು ಸ್ವಲ್ಪನೂ ಇಷ್ಟ ಇಲ್ಲ' ಎಂದಿದ್ದಾಗ ಇವನಿಗೆ ತನ್ನ ಪ್ರೀತಿಯ ಬಗ್ಗೆಯೇ ಅನುಮಾನಗಳು ಬಂದುಬಿಟ್ಟಿದ್ದವು.

ವಾರಿಜಾಳ ಸಂಬಂಧದಲ್ಲಿ ಎಲ್ಲೋ ಒಂಥರದ ಅನಿವಾರ್ಯ ಮತ್ತು ಜಾಣತನ ಇತ್ತೇನೋ. ಅದರಿಂದಲೇ ಆಕೆ 'ದೇಹವೇ ಬೇರೆ ಮದುವೆಯೇ ಬೇರೆ. ನನ್ನ ನಿನ್ನ ಅಂತರಂಗದ ಮಿಡಿತಗಳಾಗಲಿ ನಾವು ಬಯಸುವ ಸಂವೇದನೆಗಳ ನೆಲೆಯಾಗಲಿ ಬೇರೆ ಬೇರೆಯೇ ಆಗಿರುತ್ತವೆ. ಹೆಣ್ಣು, ತಾನೀಗ ಈ ರೀತಿಯಲ್ಲೇ ನಡೆದುಕೊಳ್ಳುವುದಕ್ಕೆ ಚಾರಿತ್ರಿಕವಾದ ಕಾರಣಗಳಿವೆ ಎಂಬುದನ್ನು ಮರೆಯಬೇಡ' ಎಂದು ಬಿಟ್ಟಿದ್ದಳು. ಆಗ ಈ ಮಾತು ಕೇಳಿ ಕಣ್ಣೊಳಗೆ ನೀರು ತುಂಬಿಕೊಂಡು ಒಬ್ಬನೇ ಕದ್ದು ಅಲುಬಿದ್ದ ದುಃಖ ಈಗ ಇದ್ದಕ್ಕಿದ್ದಂತೆ ಬಂದು ಅವನ ಕಣ್ಣೊಳಗೆ ಒಮ್ಮೆ ಇಣುಕಿ ನೋಡಿ ಓಹ್ ಈಗ ಇವನು ಯಾರೋ ಇನ್ನೊಂದು ಹುಡುಗಿಯ ಜೊತೆ ಇದ್ದಾನೆ. ನಾಳೆ ಬಂದು ಮಾತನಾಡಿಸಿದರೆ ಆಯಿತು ಎಂಬಂತೆ ಬಂದಂತೆಯೇ ಹೊರಟುಹೋಯಿತು. 'ಪಿ.ಯು.ಸಿ. ಹುಡುಗನ ನೀವು ಮತ್ತೆ ಹುಡುಕುವ ಕೆಲಸ ಯಾಕೆ ಮಾಡಲಿಲ್ಲ' ಎಂದ. 'ಹಾಗೆಲ್ಲಾ ಆಗುತ್ತಾ ಮೇಲ್ ಬಿದ್ ಬಂದೋಳ್ಗೆ ಮೂರ್‌ಕಾಸ್ ಬೆಲೆನೂ ಇಲ್ಲಾಂತ ಗಾದೆ ಇದೆಯಲ್ಲಾ' ಎನ್ನುತ್ತಾ 'ಮನ್ಸಿಗೆ ಇಷ್ಟ ಅದೋರೆಲ್ರನ್ನೂ ಲವ್ ಮಾಡೋಕಾಗುವುದಿಲ್ಲಾ' ಎಂದಳು. 'ನಾನು ನಿಮಗೆ ಇಷ್ಟ ಆಗ್ಲಿನಲ್ಲವಾ' ಎಂದು ಕೇಳಬೇಕೆಂದು ಬಾಯಿಗೆ ಬಂತಾದರೂ ಯಾಕೋ ಸಂಕೋಚಕ್ಕಿಂತ ಬೇರೆ ಹಿನ್ನೆಲೆಗಳಿಂದ ಕೇಳಲಾರದೇ ಹೋದ.

ರಾಜಿಯನ್ನು ಈ ದಿನ ಇದ್ದುಬಿಡು ನಾಳೆ ಊರಿಗೆ ಹೋಗುವಿಯಂತೆ, ನಿನ್ನ ಜೊತೆ ಆರಾಮವಾಗಿ ಮಾತನಾಡಿ ಈ ಹಸಿರು ಕಕ್ಕುವ ಕ್ಯಾಂಪಸ್ಸಿನ ಸಿರಿಯ ನಡುವೆ ನಾನು ಒಂದು ನಿರ್ಧಾರಕ್ಕೆ ಬರಬೇಕಾಗಿದೆ ಎಂದು ಹೇಳಿ ಇರಿಸಿಕೊಂಡವನು ಈಗ ಯಾವೊಂದನ್ನೂ ದಿಟ್ಟವಾಗಿ ಸ್ಪಷ್ಟವಾಗಿ ಹೇಳಲಾರದೆ ಹಳೆಯ ಕತ್ತಿಯಲುಗಿನ ತುಕ್ಕು ಹಿಡಿದ ಗತದ ಮೇಲೆ ಮಲಗಿ ಅದರ ಮೂಲಕ ರಾಜಿಯ ಸ್ಥಿತಿಯನ್ನೂ ತಾನು ಬಯಸುವ ಬದುಕನ್ನು ಅಳತೆ ಮಾಡುತ್ತಾ ಕುಳಿತಿದ್ದ. ರಾಜಿಗೆ ಇವನ ಒಳಸುಳಿವು ಗೊತ್ತಾಗಿದ್ದರೂ ಅವನೇ ಏನನ್ನು ಬೇಕಾದರೂ ಹೇಳಲಿ ಎಂಬಂತೆ ಆದರೆ ಅವನು ಕೇಳುವ ಮಾತುಗಳಿಗೆ ಯಾವುದೋ ಆಳದಲ್ಲಿ ನೇರವಾಗಿ ಸಂಬಂಧಪಡುವಂತೆ ತನ್ನ ಅನುಭವ ಹಿನ್ನೆಲೆ ಹಾಗೂ ಇಂದಿನ ಮನಸ್ಥಿತಿಗಳನ್ನು ಹಾಡುತ್ತಿದ್ದಳು. ಇಬ್ಬರ ಒಳಗೂ ಒಂದೊಂದು ರೂಪವಿಲ್ಲದ ಪ್ರೀತಿ ಇತ್ತಾದರೂ ಹೊರಗಿನ ಲೋಕದ ಮನುಷ್ಯ ವ್ಯಾಪಾರದ ಸಂಕೀರ್ಣತೆಗಳಿಂದಲೂ ಅದರ ಹೆದರಿಕೆಯಿಂದಲೂ ಬೇರೆ ಬೇರೆ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದರು. ವಿವೇಕನ ಹಲವಾರು ವರ್ತನೆಗಳಿಂದಲೇ ಅವನ ಜೊತೆ ಬದುಕುವುದೆಂದರೆ ಮಸೆದ ಕತ್ತಿಯಲುಗಿನ ಮೇಲೆ ಓಟದ ಸ್ಪರ್ಧೆಯನ್ನು ಇಟ್ಟಂತೆ ಎಂದು ಭಾವಿಸಿದ್ದರು. ಸ್ವತಃ ವಿವೇಕನ ಮೊದಲ ಗೆಳತಿ ವಾರಿಜಾಳೇ ಇಂಥ ಯೋಗ್ಯತಾ ಪತ್ರವನ್ನು ಕೊಟ್ಟಿದ್ದಳು. 'ಬಿಕ್ಕು ಹೆಪ್ಪುಗಟ್ಟಿದ ಮಂಚದ ಮೇಲೆ ಮಲಗಿ ಉರಿವ ಹರೆಯದ ಕುದುರೆ ಸರದಾರ ಕರ್ಣ ನಾನು' ಎಂದು ವಾರಿಜಾಳಿಗೆ ಆಗ ಆ ಮಾತಿಗೆ ಹೇಳಿಕೊಂಡಿದ್ದಾಗ ಅವಳು 'ಅಷ್ಟೇನಾ' ಎಂದು ವ್ಯಂಗ್ಯ ಮಾಡಿದ್ದಳು. 'ಅಷ್ಟೇನಾ' ಎಂಬುದರ ಒಗಟು ಏನೆಂದು ಇವನಿಗೆ ತಿಳಿಯಲೇ ಇಲ್ಲ. 'ರಾಜೀ' ಅಂತಾ ನಿಮ್ಮ ಹೆಸರಿಡಿದು ಕರೆದರೆ ಬೇಸರ ಆಗೋದಿಲ್ಲವಾ ಎಂದು ಕೇಳಿ, ನಿಮಗೆ ಅಷ್ಟೊಂದು ಸಂಕೋಚ ಯಾಕೆ ಹಾಗೇ ಕರೀರಿ ಎನಿಸಿಕೊಂಡು 'ಇನ್ನು ಮನೆಗೆ ಹೋದ ಮೇಲೆ ನಿಮ್ಮ ಅಮ್ಮ ಎಲ್ಲಾದ್ರೂ ಒಂದು ಗಂಡು ಹುಡುಕಿ ಮದುವೆ ಮಾಡಿಬಿಡ್ತಾರೆ ಅಲ್ಲವಾ? ಎಂದ. ಇವಳು ಏನನ್ನೂ ಹೇಳಲಾರದೆ 'ಮದುವೆ ಗಂಡು'